

ತರಬೇತಿಯಲ್ಲಿ ಕಸಿ ಪ್ರಾತ್ಯಕ್ಷಿಕೆ

ಥಟ್ಟನೆ ನೆನಪಿಗೆ ಬಂದಿದ್ದೇ ತಾಯ್ನೆಲದ 'ಬಾಯ್ಮನೆ ಕಸಿ'. ಉಡುಪಿ ಜಿಲ್ಲೆ ಬ್ರಹ್ಮಾವರ ಸಮೀಪದ ಪಾರಂಪಳ್ಳಿ ಮತ್ತು ನೆರೆಯ ಗ್ರಾಮದಲ್ಲಿರುವ ಬಾಯ್ಮನೆ ಕಸಿ ಎಂಬ ನಾಡಮಾವಿನ ಹಣ್ಣು ತಿಂದವರು ರುಚಿಯನ್ನು ಮರೆಯಲಾರರು. ಆ ಹಣ್ಣು ರುಚಿ, ಸುವಾಸನೆಯಲ್ಲಿ ರಾಜ. ಎರಡು ಗ್ರಾಮಗಳಲ್ಲಿ ಮೈಚಾಚಿರುವ ಮರಗಳ ಅಧ್ಯಯನ ಮಾಡುತ್ತಲೇ, ಇಂತಹ ಅಪರೂಪದ ತಳಿಗಳನ್ನು ಸಂರಕ್ಷಿಸಬೇಕೆಂಬ ತುಡಿತ ತೀವ್ರಗೊಂಡಿತು. ಈ ಮೌನ ಚಳವಳಿಗೆ ಹಲವು ಧಾರೆಗಳು ಒಗ್ಗೂಡಿ ತೊರೆಯಾಗಿ ಹರಿಯಬೇಕೆನ್ನಿಸಿದಾಗ ಸೃಷ್ಟಿಯಾಗಿದ್ದೇ 'ನಾಮಾಮಿ' ಗ್ರೂಪ್ ಎನ್ನುತ್ತ ಮೂರು ವರ್ಷಗಳ ಹಿಂದಿನ ನೆನಪು ಮೆಲಕು ಹಾಕಿದರು.

## ಮಾವು ಸೃಷ್ಟಿಸಿದ ಬಾಂಧವ್ಯ

ಈ ಗ್ರೂಪ್ ಹಲವರಿಗೆ ಬಾಂಧವ್ಯದ ಬೆಸುಗೆಯಾಗಿದೆ. ನಾಡಮಾವು ಕುತೂಹಲಿಗಳು ಹಣ್ಣಿನ ರುಚಿ ನೋಡಿ, 'ಇದೊಂದು ಕಸಿ ಗಿಡ ಮಾಡಬಹುದು ಮಾರ್ರೆ' ಎಂದು ಗ್ರೂಪ್‌ನಲ್ಲೇ ಸಲಹೆ ನೀಡುತ್ತಾರೆ. ಕೆಲವರು ವಿಳಾಸ ಪಡೆದು ಹಣ್ಣನ್ನೇ ಕಳುಹಿಸಿಕೊಡುತ್ತಾರೆ. ಬಳಗದಲ್ಲಿ ರಾಜ್ಯದ ಬೇರೆ ಬೇರೆ ಭಾಗಗಳ ಜನರು ಸೇರಿಕೊಂಡಿದ್ದಾರೆ. ವ್ಯಾಪ್ತಿ ದೊಡ್ಡದಾಗಿದ್ದರೂ, ಜನಪ್ರಿಯತೆಗಿಂತ ಮಾವಿನ ಮಮತೆಯೇ ಬಳಗದಲ್ಲಿ ಮೇಲ್ಪಂಕ್ತಿಯಲ್ಲಿರುವುದು ವಿಶೇಷ.

ಉಪಾಧ್ಯರು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಕುಕ್ಕಿಲ ಎಂಬ ಪುಟ್ಟ ಹಳ್ಳಿಯ ಇಳಿಜಾರು ಗುಡ್ಡದಲ್ಲಿ 400ಕ್ಕೂ ಹೆಚ್ಚು ಜಾತಿಯ ನಾಡಮಾವಿನ ಜೀನ್ ಬ್ಯಾಂಕ್ ಸೃಷ್ಟಿಸಿದ್ದಾರೆ. ಒಂದು ಸಹಜ ತುಲನಾತ್ಮಕ ಪ್ರಯೋಗಕ್ಕಾಗಿ, ಅದರ ಪಕ್ಕದಲ್ಲೇ 100ಕ್ಕೂ ಅಧಿಕ ಹೈಬ್ರಿಡ್ ಮತ್ತು ಎಕ್ಸಾಟಿಕ್ ಮಾವಿನ ಸಸಿಗಳನ್ನು ನಾಟಿ ಮಾಡಿದ್ದಾರೆ.

ಸಿಂಗಾಣಿ, ತಯ್ಯಿಲ್ ಚೊಪ್ಪನ್, ಬಪ್ಪಾಯಿ ಕಡುಕಾಚಿ, ಅಲ್ಬುಕರ್ಕ್, ಕೈಂತಜೆ ಜೀರಿಗೆ, ಅಯ್ಯನಕಟ್ಟೆ, ಮುಳಬಾಗಿಲು ಮೆಲೋಗರ, ಬಡಾಪೈರಿ, ಪನ್ನೆಸೊನೆ, ಉಮಡ್ಡ ಸಾಸಿವೆ, ಕೇರಳ ಅಪ್ಪೆ ಸಾಸಿವೆ, ಗಿಳಿಕುಕ್ಕು, ಬಾಯ್ಮನೆ ಕಸಿ, ಪದ್ಯಾಣ ಜೀರಿಗೆ, ದೇವರಕೊಲ್ಲಿ, ಮಾಣಿಭಟ್ಟ, ಅಮ್ಮಂಕಲ್ಲು ಇಡ್ಕಾಯಿ, ಚೆನ್ನಪ್ಪ ಚೆಡ್ಕಾರ್, ಮುಣ್ಚಿಕುಕ್ಕು ಅಜ್ಜಾವರ, ಲಾಡು ಮುಳಿಯ, ನಾಗರಡಿ ಬೆಳ್ಳೆ ಹೀಗೆ ಹೇಳುತ್ತ ಹೋದರೆ, ಅವರ ಗುಡ್ಡದ ಮಣ್ಣಿನಲ್ಲಿ ಹುಲುಸಾಗಿ ಬೆಳೆಯುತ್ತಿರುವ ಮಾಮರದ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇವುಗಳ ಅಂಚಿನಲ್ಲಿ ಕೆಲವು ಹಲಸಿನ ಸಸಿಗಳನ್ನೂ ಅವರು ನಾಟಿ ಮಾಡಿದ್ದಾರೆ.

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕಾಸರಗೋಡು, ಉಡುಪಿ, ಕೊಡಗು ಜಿಲ್ಲೆಗಳಿಂದ ಸಂಗ್ರಹಿಸಿದ ನಾಡಮಾವು ತಳಿಗಳ ಗಿಡಗಳು ಕುಕ್ಕಿಲದ ಮಣ್ಣಿನಲ್ಲಿ ಹಕ್ಕು ಸ್ಥಾಪಿಸಿವೆ. ಪ್ರತಿ 15 ಅಡಿಗೆ ಒಂದರಂತೆ ನೆಟ್ಟಿರುವ ಗಿಡಗಳು ಈಗ ಕೊಂಬೆಯೊಡೆದು ವಿಕಾಸದ ಹಂತದಲ್ಲಿವೆ.

ಎಷ್ಟೋ ಕಡೆಗಳಲ್ಲಿ ನಮ್ಮ ಕೆಲಸ ಗಮನಿಸಿದವರು, ನಾಡಮಾವಿನ ಬಗ್ಗೆ ಆಸಕ್ತಿ ತಳೆದು, 'ನಮ್ಮ ತೋಟದಲ್ಲೊಂದು ನಾಡ ಮಾವಿದೆ, ಕಸಿ ಕಡ್ಡಿ (ಸಯಾನ್) ತೆಗೆದುಕೊಂಡು ಹೋಗಿ' ಎನ್ನುವುದು ಸಂತೃಪ್ತಿ ಕೊಡುವ ವಿಚಾರ. ಮಾವು, ಹಲಸು ಮಾತ್ರವಲ್ಲ, ಜನರಲ್ಲಿ ನೆಲಮೂಲದ ಕಾಡುಹಣ್ಣಿನ ಮೋಹ ಮೂಡಿದೆ. ಎಕ್ಸಾಟಿಕ್ ಹಣ್ಣುಗಳ ಖುಷಿ ತಿಂದು ಕೈ ತೊಳೆಯುವ ತನಕ, ಆದರೆ ನಾಡಮಾವಿನ ಸಾಂಗತ್ಯ ಜೀವನ ಪರ್ಯಂತ ಎನ್ನುವವರು ಶುರುವಾಗಿದ್ದಾರೆ. ಮಾವಿನ ಚರ್ಚೆ ನಿತ್ಯ ನೂತನವಾಗಿದೆ, ರುಚಿಯಲ್ಲಿ ನಾಡ ತಳಿಯೇ ಶ್ರೇಷ್ಠ ಎಂಬುದು ನಿರೂಪಿತವಾಗುವ ಕಾಲ ಸನ್ನಿಹಿತವಾಗಿದೆ ಎನ್ನುವ ಉಪಾಧ್ಯರು, ವೃತ್ತಿಯ ನಡುವೆ ಬಿಡುವು ಮಾಡಿಕೊಂಡು, ಅಪರೂಪ ತಳಿಗಳ ಹುಡುಕಾಟ ಮುಂದುವರಿಸಿದ್ದಾರೆ.

## ಸ್ನೇಹಬಳಗದ ವಿಸ್ತರಣೆ

ಸುಳ್ಯದ ಜಯರಾಮ ಅಜ್ಜಾವರರದು ಇನ್ನೊಂದು ಕಥೆ. ಅವರು ಅಪ್ಪಟ ಕೃಷಿಕರು. ಮನೆಯಂಗಳದ ಕಾಡುಮಾವು ಸಂರಕ್ಷಿಸಬೇಕೆಂಬ ಅವರ ದಶಕದ ಕನಸಿಗೆ ರೆಕ್ಕೆ ಮೂಡಿದ್ದು ಇತ್ತೀಚೆಗಷ್ಟೆ. ಹಿಂದೊಮ್ಮೆ ಮರದ ಕಸಿ ಕಡ್ಡಿಯನ್ನು ನರ್ಸರಿಗೆ ಕೊಂಡೊಯ್ದು ಅಲ್ಲಿ ಸಿದ್ಧವಾದ ಗಿಡಗಳನ್ನು ತಂದು ಹಿತ್ತಲಿನಲ್ಲಿ ನೆಟ್ಟಿದ್ದರೂ ಹಂದಿಯ ಕಾಟದಲ್ಲಿ ಅವು



ಕಸಿ ಕಡ್ಡಿ ಸಂಗ್ರಹದಲ್ಲಿ ನಾಮಾಮಿ ಬಳಗ

## ಕಸಿ ವಿದ್ಯೆಯ ಕ್ರಾಂತಿ

ಕಸಿ ತರಬೇತಿ ಹಳ್ಳಿಯಲ್ಲಿ ಕ್ರಾಂತಿ ಮಾಡಿದೆ. ಕಸಿ ವಿದ್ಯೆ ಸಿದ್ಧಿಸಿಕೊಂಡವರು ಪ್ರಯೋಗಶೀಲರಾಗಿದ್ದಾರೆ. ಅಳಿವಿನಂಚಿನ ಮಾವು ಮಾತ್ರವಲ್ಲ, ಮನೆಯ ಗಾರ್ಡನ್ ಚೆಲುವಿಯರಾದ ಗುಲಾಬಿ, ದಾಸವಾಳ ಗಿಡಗಳನ್ನು ತಾವೇ ಕಸಿ ಮಾಡಿ ಬದುಕಿಸಿಕೊಳ್ಳುವಷ್ಟು ಪಳಗಿದ್ದಾರೆ. ಕಸಿ ತರಬೇತಿ ನಡೆದ ನಂತರ ಉತ್ತಮ ಜಾತಿಯ ನಾಡಮಾವು ಸಂರಕ್ಷಣೆಗೆ ವೇಗ ದೊರೆತಿದೆ. ಮಾವಿನ ಗುಣಲಕ್ಷಣ ನೋಡಿ, ಕಸಿ ಕಡ್ಡಿ ತಂದುಕೊಡುವವರೂ ಹೆಚ್ಚಾಗಿದ್ದಾರೆ. ಕಸಿ ಕಡ್ಡಿ ತಂದುಕೊಡುವವರಿಗೆ ಉಚಿತವಾಗಿ ಗಿಡ ಕೊಡುವ ಜೊತೆಗೆ, ಉಳಿದ ಹತ್ತಾರು ಗಿಡಗಳನ್ನು ಆಸಕ್ತರಿಗೆ ಕೊಡುತ್ತೇವೆ. 'ಎಲ್ಲಾದರೂ ಇರಲಿ ನಾಡಮಾವು ಸಂತತಿ ಉಳಿಯಲಿ' ಎಂಬುದೇ ನಮ್ಮ ಮನದ ಇಂಗಿತ. ನಾಮಾಮಿಯಲ್ಲಿ ನೂರಾರು ಸಕ್ರಿಯ ಕಾರ್ಯಕರ್ತರಿದ್ದಾರೆ. ಸದಸ್ಯರ ಸಂಖ್ಯೆ 300 ಮೀರಿದೆ.

-ಜಯರಾಮ ಅಜ್ಜಾವರ